| | | | | | | | | |
|---|---|---|---|---|---|---|---|---|
| 5. | Tumkur | 43 | 27 | 70 | 13 | - | 13 | 83 |
| 6. | Shimoga | 41 | 12 | 53 | 4 | 1 | 5 | 58 |
| 7. | Mysore | 53 | 10 | 63 | 8 | 2 | 10 | 73 |
| 8. | Mandya | 32 | 5 | 37 | 2 | 1 | 3 | 40 |
| 9. | Hassan | 44 | 5 | 49 | 3 | - | 3 | 52 |
| 10. | Chickmagalur | 26 | - | 26 | 5 | - | 5 | 31 |
| 11. | Coorg | 24 | - | 24 | 2 | - | 2 | 26 |
| 12. | Dakshina0 Kannada | 40 | - | 40 | 3 | - | 3 | 43 |
| 13. | Belgaum | 37 | 10 | 47 | 3 | 1 | 4 | 51 |
| 14. | Bijapur | 45 | 66 | 111 | 2 | - | 2 | 113 |
| 15. | Dharwad | 61 | 24 | 85 | 2 | 3 | 5 | 90 |
| 16. | Karwar | 27 | 1 | 28 | 1 | - | 1 | 29 |
| 17. | Gulbarga | 66 | 24 | 90 | 13 | 2 | 15 | 105 |
| 18. | Raichur | 41 | 1 | 42 | 4 | - | 4 | -46 |
| 19. | Bellary | 41 | 7 | 48 | 5 | 1 | 6 | 54 |
| 20. | Bidar | 32 | 6 | 38 | 4 | - | 4 | 42 |
| | Total | 822 | 275 | 1097 | 108 | 40 | 148 | 1245 |

ವಿಷಯ : - ಕೇಂದ್ರ ಸರ್ಕಾರದಿಂದ ಪರಿಶಿಷ್ಟ ಜಾತಿ : ಪಿರಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಬಂದಿರುವ ಹಣದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 145(438)

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕ ಪುರ)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) 1993-94ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಪರಿಶಿಷ್ಟ ಜಾತಿ:ಪಂಗಡದ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಿಗಾಗಿ ಸಮಾಜ ಕಲ್ಯಾಣ ಇಲಾಖೆಗೆ ಬಂದಿರುವ ಹಣ ಎಷ್ಟು?

(ಆ)ಅದಕ್ಕಾಗಿ ಈವರೆಗೂ ಖರ್ಚಾದ ಹಣವೆಷ್ಟು?

ಶ್ರೀ ಧರ್ಮ ಸಿಂಗ್

(ಸಮಾಜ ಕಲ್ಯಾಣ ಸಚಿವರು)

ಸಮಾಜ ಕಲ್ಯಾಣ ಇಲಾಖೆಗೆ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಅಭಿವೃದ್ಧಿಗಾಗಿ 1993-94ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ಈ ರೀತಿ ಹಣ ಬಂದಿದೆ.

1) ಇಲಾಖೆ ಕಾರ್ಯಕ್ರಮಗಳಿಗಾಗಿ– 234.65ಲಕ್ಷ ರೂ.

2) ವಿಶೇಷ ಘಟಕ ಯೋಜನೆ– 624.42ಲಕ್ಷ ರೂ.

3) ಗಿರಿಜನ ಉಪ ಯೋಜನೆ-655.00ಲಕ್ಷ ರೂ.

ಒಟ್ಟು- 914.07ಲಕ್ಷ ರೂ.

ಇಲಾಖಾ ಕಾರ್ಯಕ್ರಮಗಳಿಗಾಗಿ 1993-94ನೇ ಸಾಲಿನಲ್ಲಿ ಈವರೆಗೆ 104.08 ಲಕ್ಷ ರೂ.ಗಳ ಖರ್ಚಾಗಿವೆ. ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಗಳಿಗೆ ಹಣವನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ವಿಷಯ :- ಹುಬ್ಬಳ್ಳಿಯ ಸಂಜಯ ಸಹಕಾರಿ ನೂಲಿನ ಗಿರಣಿಯನ್ನು ಎನ್.ಸಿ.ಡಿ.ಸಿ 4ನೇ ಯೋಜನೆಯಲ್ಲಿ ಕೈಕೊಳ್ಳುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 146(135)

ಶ್ರೀ ಪಿ.ಸಿ.ಸಿದ್ಧನಗೌಡರ್(ಕಲಘಟಗಿ)

ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿಯಲ್ಲಿ ಸಂಜಯ ಸಹಕಾರಿ ಗಿರಣಿಯನ್ನು ಎನ್.ಸಿ.ಡಿ.ಸಿ. 4ನೇ ಯೋಜನೆಯಲ್ಲಿ ತೆರೆಯಲು ಸರ್ಕಾರದ ಒಪ್ಪಿಗೆಯನ್ನು ಸೂಚಿಸಿ ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಲಾಗಿದೆಯೆ;

ಆ) ಹಾಗಿದ್ದಲ್ಲಿ, ಈ ಮೇಲ್ಕಂಡ ಗಿರಣಿಗೆ ತಗಲುವ ಅಂದಾಜು ವೆಚ್ಚವೆಷ್ಟು :

ಇ) ಕೇಂದ್ರ ಸರ್ಕಾರವು ಮೇಲ್ಕಂಡ ಗಿರಣಿಯನ್ನು ಎನ್‌ಸಿಡಿಸಿ 4ನೇ ಯೋಜನೆಯಲ್ಲಿ ತೆಗೆಯಲು ಅನುಮತಿಯನ್ನು ನೀಡಿದೆಯೆ :

ಈ) ನೀಡದಿದ್ದಲ್ಲಿ ಕೂಡಲೇ ಕೇಂದ್ರದ ಅನುಮತಿಯನ್ನು ಹಾಗೂ ಹಣ ಸಹಾಯವನ್ನು ಪಡೆದು ಎನ್‌ಸಿಡಿಸಿ 4ನೇ ಯೋಜನೆಯಲ್ಲಿ ತೆಗೆಯಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಹೆಚ್.ಕೆ.ಪಾಟೀಲ್

(ಜವಳಿ ರಾಜ್ಯ ಸಚಿವರು)

-ಹೌದು-

ರೂ.2838.00 ಲಕ್ಷಗಳು

ಇನ್ನೂ ಇಲ್ಲ.

ಈ ಪ್ರಸ್ತಾವನೆಯನ್ನು ಈಗಾಗಲೇ ಎನ್‌ಸಿಡಿಸಿ 4ನೇ ಯೋಜನೆಯಡಿಯಲ್ಲಿ ಎತ್ತಿಕೊಳ್ಳಲು ಶಿಫಾರಸ್ಸು ಮಾಡಿದೆ. ಅವಶ್ಯಕ ಕ್ರಮ ಕೈಗೊಳ್ಳಲಾಗುವುದು.

ವಿಷಯ :- ಸ್ಟೈಫೆಂಡರಿ ಪದವೀಧರರನ್ನು ಮೇಲಿನ ದರ್ಜೆಯ ಸಹಾಯಕ ಹುದ್ದೆಗೆ ನೇಮಿಸಿಕೊಳ್ಳುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 147(152)

ಶ್ರೀ ಪಿ.ಸಿ. ಸಿದ್ಧನ ಗೌಡರ್(ಕಲಘಟಗಿ)

ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಒಟ್ಟು ಇರತಕ್ಕ ಸ್ಟೈಪೆಂಡರಿ ಪದವೀಧರರು ಎಷ್ಟು;

ಆ) ಅದರಲ್ಲಿ ಎಷ್ಟು ಜನರನ್ನು ಈಗಾಗಲೇ ಖಾಯಂಗೊಳಿಸಲಾಗಿದೆ;